ನೀವು ನೆರವೇರಿಸಬೇಕಾದ ಅತ್ಯಂತ ಅರ್ಹ ಷರತ್ತುಗಳು ನಿಮಗೆ ಲೈಂಗಿಕ ಸಂಪರ್ಕವನ್ನು ಧರ್ಮಸಮ್ಮತಗೊಳಿಸುವ ಶರತ್ತುಗಳಾಗಿವೆ

ಉಕ್ಬ ಬಿನ್ ಆಮಿರ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳಿದರು:
ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನೀವು ನೆರವೇರಿಸಬೇಕಾದ ಅತ್ಯಂತ ಅರ್ಹ ಷರತ್ತುಗಳು ನಿಮಗೆ ಲೈಂಗಿಕ ಸಂಪರ್ಕವನ್ನು ಧರ್ಮಸಮ್ಮತಗೊಳಿಸುವ ಶರತ್ತುಗಳಾಗಿವೆ." [صحيح] [متفق عليه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ತಿಳಿಸುವುದೇನೆಂದರೆ, ಮಹಿಳೆಯೊಂದಿಗೆ ಲೈಂಗಿಕ ಸಂಪರ್ಕ ಹೊಂದಲು ಕಾರಣವಾಗುವ ಷರತ್ತುಗಳು ನೆರವೇರಿಸಲು ಅತ್ಯಂತ ಅರ್ಹವಾದ ಷರತ್ತುಗಳಾಗಿವೆ. ಇವು ಲೈಂಗಿಕ ಸಂಪರ್ಕವನ್ನು ಅನುಮತಿಸುವ ಶರತ್ತುಗಳಾಗಿದ್ದು ಮಹಿಳೆ ತನ್ನ ವಿವಾಹ ಕರಾರಿನಲ್ಲಿ ಇವುಗಳ ಬೇಡಿಕೆಯಿಡುತ್ತಾಳೆ.

https://sunnah.global/hadeeth/kn/show/6021